# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7053/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 04/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀಮತಿ ಬಿ. ಗುಲಾಬಿ ಕೋಂ ಕೆ. ನಾರಾಯಣ, ಅಂಜಾರು ಗ್ರಾಮ, ಹಿರಿಯಡ್ಕ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀಮತಿ ಬಿ. ಗುಲಾಬಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ತಾಲ್ಲೂಕಿನ ಅಂಜಾರು ಗ್ರಾಮದಲ್ಲಿ ತಾವು ವಾಸವಾಗಿದ್ದು, ತಮ್ಮ ಪಕ್ಕದ ಮನೆಯವರಾದ ಶ್ರೀ ವಿಶ್ವನಾಥ್ ನಾಯಕ್ ಇವರ ಶೌಚಾಲಯದ ಶೇಖರಣಾ ಗುಂಡಿ (ಸೆಪ್ಟಿಕ್ ಟ್ಯಾಂಕ್) ದೂರುದಾರರ ಬಾವಿಯ ಹತ್ತಿರದಲ್ಲೇ ಇರುವುದರಿಂದ, ಬಾವಿಯ ಕುಡಿಯುವ ನೀರು ಕಲುಷಿತಗೊಂಡಿರುತ್ತದೆ. ಇದರಿಂದ, ತಮಗೆ ಹಾಗೂ ಕುಟುಂಬದವರಿಗೆ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ, ಈ ಬಗ್ಗೆ ಕ್ರಮ ಜರುಗಿಸಲು ಎದುರುದಾರರಾದ ಕೋಡಿಬೆಟ್ಟು ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಹಾಗೂ ಸದರಿ ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ವಿನಂತಿಸಿ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಹಾಗೂ ಜಿಲ್ಲಾ ಪರಿಸರ ಮಾಲಿನ್ಯಾಧಿಕಾರಿಯವರಿಗೆ ತನಿಖಾ ವರದಿಯನ್ನು ಸಲ್ಲಿಸಲು ತಿಳಿಸಿ ಪತ್ರವನ್ನು ರವಾನಿಸಲಾಗಿದ್ದು, ಎದುರುದಾರರುಗಳು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ ಹಾಗೂ ಜಿಲ್ಲಾ ಪರಿಸರ ಅಧಿಕಾರಿಯವರಿಂದಲೂ ಸಹ ವರದಿಯನ್ನು ಪಡೆಯಲಾಗಿರುತ್ತದೆ. ಎದುರುದಾರರುಗಳು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಾದ ಶ್ರೀಮತಿ ಗುಲಾಬಿಯವರ ಮನೆಯ ಬಾವಿ ಕಲುಷಿತಗೊಂಡಿರುವ ಬಗ್ಗೆ ಪಂಚಾಯತಿ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳಲಾಗಿದ್ದು, ಗ್ರಾಮ ಸಭೆಯ ನಿರ್ಣಯದಂತೆ ದೂರುದಾರರ ಪಕ್ಕದ ಮನೆಯವರಿಗೆ ನೋಟೀಸ್ ನೀಡಿ ಅವರುಗಳನ್ನು ಕಛೇರಿಗೆ ಕರೆಸಿಕೊಂಡು ಜಿಲ್ಲಾ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಿರುತ್ತಾರೆ. ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಈ ವಿಚಾರವನ್ನು ನ್ಯಾಯ ಸಮಿತಿಯ ಗಮನಕ್ಕೆ ತಂದ ನಂತರ ಶ್ರೀ ವಿಶ್ವನಾಥ್ ನಾಯ್ಕ, ಶ್ರೀ ರತ್ನಾಕರ್ ಆಚಾರಿ ಮತ್ತು ಶ್ರೀ ಭಾಸ್ಕರ್ ಆಚಾರಿ ಇವರಿಗೆ ತಮ್ಮ ಮನೆಯ ಲೆಟ್ರಿನ್ ಪಿಟ್‌ಗಳನ್ನು ಪರಿಶೀಲಿಸಿದ ಅಧಿಕಾರಿಯವರು ಶ್ರೀಮತಿ ಗುಲಾಬಿಯವರ ಮನೆಯ ದಕ್ಷಿಣಕ್ಕೆ ಪಿವಿಸಿ ಪೈಪ್ ಹಾಕಿ ಮೂರು ಪಿಟ್ ಕನೆಕ್ಷನ್ಸ್ ನೀಡಲು ತಿಳಿಸಿದ್ದು, ಆದರೆ, ಸದರಿ ಪಿಟ್ ಅನ್ನು ತೋಡುವ ಜಾಗವು ಸರ್ಕಾರಿ ಜಾಗವಾಗಿದ್ದು, ಮೂರು ಪಿಟ್‌ಗಳನ್ನು ಸ್ಥಳಾಂತರಗೊಳಿಸಲು ಸಾಧ್ಯವಾಗದ ಕಾರಣ, ಒಂದು ಸಂಧಾನ ಸೂತ್ರವನ್ನು ಯೋಚಿಸಿ ಅವರ ಮುಂದೆ ಇಡಲಾಯಿತು. ಅದರಂತೆ, ಮೂರು ಪಿಟ್‌ಗಳನ್ನು ಸ್ಥಳಾಂತರಗೊಳಿಸಲು ಸಾಧ್ಯವಾಗದ ಕಾರಣ, ಶ್ರೀಮತಿ ಗುಲಾಬಿ ರವರು ಗ್ರಾಮ ಪಂಚಾಯತಿಯಿಂದ ಕುಡಿಯುವ ನೀರಿನ ಸಂಪರ್ಕವನ್ನು ಪಡೆದುಕೊಂಡು ಉಪಯೋಗಿಸುತ್ತಿದ್ದು, ಅದರಿಂದ, ನೈರ್ಮಲ್ಯಕ್ಕೆ ಹೆಚ್ಚು ಹೊತ್ತು ನೀಡುತ್ತಿರುವ ಉದ್ದೇಶದಿಂದ ವಾಸ್ತವ ಪರಿಸ್ಥಿತಿಯನ್ನು ಅರಿತು ಶ್ರೀಮತಿ ಗುಲಾಬಿರವರು ಪಂಚಾಯತಿ ವತಿಯಿಂದ ಪಡೆದುಕೊಂಡು ಕುಡಿಯುವ ನೀರನ್ನು ಉಪಯೋಗಿಸಿಕೊಳ್ಳುವುದು ಮತ್ತು ಪರಿಹಾರವಾಗಿ ಮೇಲೆ ತಿಳಿಸಿದ ಮೂರು ವ್ಯಕ್ತಿಗಳು ಎರಡು ವರ್ಷಗಳವರೆಗೆ ನೀರಿನ ಶುಲ್ಕದಲ್ಲಿ ಶೇಕಡ 50 ರಷ್ಟನ್ನು ಶುಲ್ಕವಾಗಿ ಶ್ರೀಮತಿ ಗುಲಾಬಿಯವರಿಗೆ ನೀಡುವುದು, ಉಳಿದ ಶೇಕಡ 50 ನೀರಿನ ದರವನ್ನು ಪಂಚಾಯತಿ ಖಾತೆಗೆ ಸಲ್ಲಿಸುವುದು ಎಂದು ತೀರ್ಮಾನಿಸಲಾಗಿದ್ದು, ಅದರಂತೆ, ನಡೆದುಕೊಳ್ಳಲು ಪ್ರಕರಣದ ಪಕ್ಷಗಾರರುಗಳಿಗೆ ತಿಳಿಸಲಾಗಿದ್ದು, ಈ ಬಗ್ಗೆ ನಿರ್ಣಯವನ್ನು ಸರ್ವಾನುಮತದಿಂದ ಪಂಚಾಯತಿ ವತಿಯಿಂದ ತೆಗೆದುಕೊಂಡಿದ್ದು, ಇದರಂತೆ, ದೂರುದಾರರಿಗೆ ತಿಳಿಸಿ ಆಕ್ಷೇಪಣೆಗಳು ಇದ್ದರೆ, ಆಕ್ಷೇಪಣೆಯನ್ನು ಸಲ್ಲಿಸಲು ತಿಳಿಸಲಾಗಿತ್ತು ಎಂದು ತಿಳಿಸಿರುತ್ತಾರೆ.

3. ಜಿಲ್ಲಾ ಪರಿಸರ ಮಾಲಿನ್ಯ ಅಧಿಕಾರಿಯವರು ವರದಿಯನ್ನು ಸಲ್ಲಿಸಿ, ಅದರಲ್ಲಿ ದೂರುದಾರರು ತಿಳಿಸಿರುವ ಅವರ ಮನೆಯ ಬಳಿ ಇರುವ ಬಾವಿಯ ನೀರನ್ನು ಸ್ಥಳ ಪರಿಶೀಲನಾ ಕಾಲದಲ್ಲಿ ಪರಿಶೀಲಿಸಿದ್ದು, ಸ್ಥಳದಿಂದ ನೀರಿನ ಮಾದರಿಯನ್ನು ತೆಗೆದುಕೊಂಡು, ಮಾದರಿಯನ್ನು ಪರೀಕ್ಷಾ ಕೇಂದ್ರಕ್ಕೆ ಸಲ್ಲಿಸಲಾಯಿತ್ತೆಂದು ತಿಳಿಸಿರುತ್ತಾರೆ. ಪರೀಕ್ಷಾ ಕೇಂದ್ರದ ವರದಿಯ ಪ್ರಕಾರ ಬಾವಿಯ ನೀರು ಶೌಚಾಲಯದ ನೀರಿನೊಡನೆ ಬೆರೆತು ಕಲುಷಿತಗೊಂಡಿರುವ ಬಗ್ಗೆ ವರದಿಯನ್ನು ಪಡೆದಿರುತ್ತಾರೆ.

4. ಸದರಿ ವರದಿಯ ಆಧಾರದ ಮೇಲೆ ಮತ್ತು ಎದುರುದಾರರ ಆಕ್ಷೇಪಣೆ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಪಡೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಶ್ರೀ ವಿಶ್ವನಾಥ್‌ನಾಯ್ಕ ರವರ ಲೆಟ್ರಿನ್ ಪಿಟ್ ಅನ್ನು 2004–05ನೇ ಇಸವಿಯಲ್ಲಿ ನಿರ್ಮಿಸಲಾಗಿರುತ್ತದೆ. ಪಂಚಾಯತಿಯವರು ಸ್ಥಳ ಪರಿಶೀಲನೆ ಮಾಡಿ ಲೈಸೆನ್ಸ್ ನೀಡಿರುವುದು ಮೊದಲನೇ ಅಪರಾಧವಾಗಿರುತ್ತದೆ. ದೂರುದಾರರ

ಮನೆಯು 1999ನೇ ಇಸವಿಯಲ್ಲಿಯೇ ನಿರ್ಮಾಣವಾಗಿರುತ್ತದೆ. ಆದ್ದರಿಂದ, ಈ ಬಗ್ಗೆ ಪಂಚಾಯತಿಯವರು ಸ್ಥಳ ಪರಿಶೀಲನೆ ನಡೆಸಿದ ನಂತರ, ಸದರಿ ಶ್ರೀ ವಿಶ್ವನಾಥ್ ನಾಯ್ಕ ರವರಿಗೆ ದೂರುದಾರರ ಮನೆಯ ಉತ್ತರ ಭಾಗಕ್ಕೆ ಲೆಟ್ರಿನ್ ಕಟ್ಟಲು ಅನುಮತಿ ನೀಡಿರುವುದು ಸರಿ ಇರುವುದಿಲ್ಲ. ದೂರುದಾರರ ಬಾವಿಯು ಸುಮಾರು 26 ವರ್ಷಗಳ ಹಿಂದಿನಿಂದಲೂ ಇರುತ್ತದೆ. ಈ ಅಂಶವನ್ನು ಪರಿಶೀಲಿಸಿ ಶ್ರೀ ವಿಶ್ವನಾಥ್ ನಾಯ್ಕ ರವರಿಗೆ ಲೆಟ್ರಿನ್ ಕಟ್ಟುವ ಬಗ್ಗೆ ಪರವಾನಗಿಯನ್ನು ನೀಡಬೇಕಾಗಿತ್ತು. ಆದರೂ ಸಹ ವಿಶ್ವನಾಥ್ ನಾಯ್ಕ ರವರ ಈಗಿನ ಲೆಟ್ರಿನ್ ಸಂಪರ್ಕವನ್ನು ಕಡಿತಗೊಳಿಸಿ ಮನೆಯಿಂದ ದಕ್ಷಿಣ ಭಾಗದಲ್ಲಿ ಪ್ರತ್ಯೇಕ ಪಿಟ್ ಅನ್ನು ರಚಿಸಿ ಪಿವಿಸಿ ಪೈಪ್ ಮೂಲಕ ಸಂಪರ್ಕ ಪಡೆಯುವಂತೆ ಅನುಮತಿಯನ್ನು ಕೊಡಿಸಿದ್ದರೂ ಸಹ ಈವರೆವಿಗೂ ಶ್ರೀ ವಿಶ್ವನಾಥ್ ನಾಯ್ಕ ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿಕೊಂಡಿರುತ್ತಾರೆ.

5. ದೂರಿನಂಶಗಳನ್ನು ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ ಶ್ರೀಮತಿ ಗುಲಾಬಿಯವರ ಮನೆಯ ಬಾವಿಯ ನೀರನ್ನು ಜೈವಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಕಲುಷಿತಗೊಂಡಿದ್ದು, ಅದು ಕುಡಿಯಲು ಬಳಸುವುದಕ್ಕೆ ಯೋಗ್ಯವಾಗಿಲ್ಲವೆಂದು ಜಿಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿಯವರು ವರದಿಯನ್ನು ನೀಡಿರುವುದು ಸ್ಪಷ್ಟ ಪಡುತ್ತದೆ. ಸದರಿ ವರದಿಯನ್ನು ಹಾಜರುಪಡಿಸಲಾಗಿದೆ. ಸದರಿ ಬಾವಿಯ ನೀರು ಕಲುಷಿತಗೊಳ್ಳಲು ಶ್ರೀ ವಿಶ್ವನಾಥ್ ನಾಯ್ಕ ರವರು ಕಟ್ಟಿರುವ ಲೆಟ್ರಿನ್ ಪಿಟ್‌ನಿಂದ ಬಸಿಯುತ್ತಿರುವ ನೀರಿನಿಂದಾಗಿರುತ್ತದೆ ಎಂದು ಕಂಡು ಬರುತ್ತದೆ. ಈ ಬಗ್ಗೆ ಸದರಿ ಬಾವಿ ನೀರು ಕಲುಷಿತಗೊಳ್ಳುವುದನ್ನು ತಡೆಗಟ್ಟುವ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ ಇವರು ಜಿಲ್ಲಾಧಿಕಾರಿಯವರಿಗೆ ಪತ್ರವನ್ನು ಬರೆದು, ಅದರಲ್ಲಿ ಶ್ರೀಮತಿ ಗುಲಾಬಿ ಇವರು ನೀಡಿರುವ ದೂರಿನ ಬಗ್ಗೆ ದೂರುದಾರರು ಶ್ರೀ ವಿಶ್ವನಾಥ್ ನಾಯ್ಕ, ಶ್ರೀ ರತ್ನಾಕರ್ ಆಚಾರಿ ಮತ್ತು ಶ್ರೀ ಭಾಸ್ಕರ್ ಆಚಾರಿಯವರು ಸದರಿ ಕೋಡಿಬೆಟ್ಟು ಗ್ರಾಮ ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ಹಾಜರಾಗಿ ಚರ್ಚಿಸಿ, ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದು, ಅದರಂತೆ, ಈಗಿರುವ ಲೆಟ್ರಿನ್ ಪಿಟ್‌ಗಳ ಸಂಪರ್ಕವನ್ನು ಕಡಿತಗೊಳಿಸಿ ಶ್ರೀಮತಿ ಗುಲಾಬಿಯವರ ಮನೆಯ ಜಾಗದಿಂದ ದಕ್ಷಿಣಕ್ಕೆ ಕೆಳಗಿನ ಜಾಗದಲ್ಲಿ ಪ್ರತ್ಯೇಕ ಲೆಟ್ರಿನ್ ಪಿಟ್ ರಚಿಸಿ ಪಿವಿಸಿ ಪೈಪ್ ಮೂಲಕ ಸಂಪರ್ಕ ಪಡೆಯುವುದು ಸೂಕ್ತವೆಂದು ತೀರ್ಮಾನಕ್ಕೆ ಬರಲಾಗಿರುತ್ತದೆ. ದೂರುದಾರರು ಈ ಹಿಂದೆ ದೂರು ನೀಡಿದ್ದು, ಅದಕ್ಕೆ ತಮ್ಮ ಪತ್ರದ ಉಲ್ಲೇಖ (2)ರಂತೆ ಹಿಂಬರಹವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ ರವರ ಪತ್ರವನ್ನು ಹಾಜರುಪಡಿಸಲಾಗಿದೆ. ಅದರಂತೆ, ಶ್ರೀ ವಿಶ್ವನಾಥ್ ನಾಯ್ಕ, ಶ್ರೀ ರತ್ನಾಕರ್ ಆಚಾರಿ ಮತ್ತು ಶ್ರೀ ಭಾಸ್ಕರ್ ಆಚಾರಿಯವರುಗಳು ತಮ್ಮ ಮನೆಯ ದಕ್ಷಿಣದಲ್ಲಿ ಲೆಟ್ರಿನ್ ಪಿಟ್‌ಗಳನ್ನು ರಚಿಸಿ ಅದಕ್ಕೆ ಪಿವಿಸಿ ಪೈಪ್ ಮೂಲಕ ಸಂಪರ್ಕ

ಕಲ್ಪಿಸಿಕೊಳ್ಳಬೇಕಾಗಿದ್ದು, ಅದು ಮಾಡದೇ ಹಳೇ ಲೆಟ್ರಿನ್ ಅನ್ನೇ ಉಪಯೋಗಿಸುತ್ತಿರುವುದಾಗಿ ದೂರುದಾರರು ತಮ್ಮ ಮಾರುತ್ತರದಲ್ಲಿ ತಿಳಿಸಿರುತ್ತಾರೆ. ಆದ್ದರಿಂದ, ದೂರುದಾರರ ತೊಂದರೆಯನ್ನು ನಿವಾರಿಸಲು ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ತೀರ್ಮಾನಿಸಿರುವಂತೆ ಶ್ರೀ ವಿಶ್ವನಾಥ್ ನಾಯ್ಕ, ಶ್ರೀ ರತ್ನಾಕರ್ ಆಚಾರಿ ಮತ್ತು ಶ್ರೀ ಭಾಸ್ಕರ್ ಆಚಾರಿಯವರು ತಮ್ಮ ಮನೆಯ ದಕ್ಷಿಣ ಭಾಗದಲ್ಲಿ ಲೆಟ್ರಿನ್ ಪಿಟ್‌ಗಳನ್ನು ತೆಗೆಸಿ ಪಿವಿಸಿ ಪೈಪ್ ನಿಂದ ಸಂಪರ್ಕ ಕಲ್ಪಿಸಿದ್ದೇ ಆದಲ್ಲೀ, ದೂರುದಾರರ ತೊಂದರೆ ನಿವಾರಣೆಯಾಗುತ್ತದೆ ಮತ್ತು ಇದರಿಂದ ಸದರಿ ಶ್ರೀ ವಿಶ್ವನಾಥ್ ನಾಯ್ಕ, ಶ್ರೀ ರತ್ನಾಕರ್ ಆಚಾರಿ ಮತ್ತು ಶ್ರೀ ಭಾಸ್ಕರ್ ಆಚಾರಿಯವರಿಗೂ ಸಹ ಯಾವುದೇ ತೊಂದರೆ ಉಂಟಾಗುವುದಿಲ್ಲವೆಂದು ಕಂಡು ಬರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕಿನ ಅಂಜಾರು ಗ್ರಾಮದಲ್ಲಿ ವಾಸಿಸುತ್ತಿರುವ ದೂರುದಾರಾದ ಶ್ರೀಮತಿ ಬಿ. ಗುಲಾಬಿ ರವರ ಪಕ್ಕದ ಮನೆಯವರಾದ ಶ್ರೀ ವಿಶ್ವನಾಥ್ ನಾಯ್ಕ, ಶ್ರೀ ರತ್ನಾಕರ್ ಆಚಾರಿ ಮತ್ತು ಶ್ರೀ ಭಾಸ್ಕರ್ ಆಚಾರಿಯವರುಗಳ ಲೆಟ್ರಿನ್‌ನ ಪಿಟ್‌ಗಳನ್ನು ದಕ್ಷಿಣ ಭಾಗದಲ್ಲಿ ರಚಿಸಿ ಪಿವಿಸಿ ಪೈಪ್‌ಗಳಿಂದ ಸಂಪರ್ಕ ಕಲ್ಪಿಸಲು ಸೂಚಿಸಿ ಕಾನೂನಿನಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- .. 04/01/2017.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 04/01/17